ದಿಃ 14.03.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯ್ತು.

ಪಾಟೀ ಸವಾಲು – ಎದುರುದಾರ ಪರ ಶ್ರೀ ಆರ್ ಎನ್ ಕೆ ವಕೀಲರಿಂದ –

ಅಪಘಾತ ವಾದ ದಿನ ನಾನೇ ದ್ವಿಚಕ್ರವಾಹನವನ್ನು ಚಲಾಯಿಸುತ್ತಾ ಇದ್ದೆನು. ನಾನು ಆ ದಿನ ಬೆಳ್ಳಿಗೆರೆ ಗ್ರಾಮದಿಂದ ಶಿವನಿಗೆ ಕಡೆಗೆ ಹೋಗುತ್ತಾ ಇದ್ದೆವು. ಸದರಿ ರಸ್ತೆಯು 12 ಅಡಿ ಅಗಲ ಇರುತ್ತದೆ. ಸುಮಾರು 60 ರಿಂದ 70 ಅಡಿ ಅಂತರದಲ್ಲಿ ಟಾಟಾ ಏಸ್ ವಾಹನ ಬರುತ್ತಿರುವುದನ್ನು ಗಮನಿಸಿದೆನು. ಅಪಘಾತದಲ್ಲಿ ಟಾಟಾ ಏಸ್ ವಾಹನಕ್ಕೆ ಯಾವುದೇ ಜಖಂ ಆಗಿಲ್ಲ ಎಂದರೆ ಸರಿ. ಅಪಘಾತವಾದ ತಕ್ಷಣ ನಾನು ಎಡಕ್ಕೆ ಬಿದ್ದಿರುತ್ತೇನೆ. ನನಗೆ ಗಾಯಗಳು ಬಲಬದಿಗೆ ಆಗಿರುತ್ತವೆ. ಟಾಟಾ ಏಸ್ ವಾಹನ ನಮಗೆ ಅಪಘಾತ ಪಡಿಸಿಲ್ಲ, ನಾನೇ ನನ್ನ ದ್ವಿ ಚಕ್ರ ವಾಹನದಿಂದ ಬಿದ್ದು ಗಾಯಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಂತರ ಪರಿಹಾರ ಹಣವನ್ನು ಪಡೆಯಲು ಟಾಟಾ ಏಸ್ ವಾಹನದ ವಿರುದ್ಧ ಸುಳ್ಳುದೂರು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

ಆ ದಿನ ನಾನು ಚಲಾಯಿಸುತ್ತಾ ಇದ್ದ ದ್ವಿ ಚಕ್ರ ವಾಹನದ ಮಾಲಿಕರು ಬೆಂಗಳೂರಿನ ವಾಸಿಯಾದ ಶ್ರೀಕಾಂತ್ ಎನ್ನುವವರು ಎಂದರೆ ಸರಿ. ಅಪಘಾತವಾದ ನಂತರ ಪೊಲೀಸರು ದ್ವಿಚಕ್ರ ವಾಹನದ ದಾಖಲೆಗಳನ್ನು ಹಾಜರುಪಡಿಸಿ ಎಂದು ಹೇಳಿದ್ದರು ಎಂದರೆ ಸರಿ. ನಂತರ ನಾನು ಪೊಲೀಸರಿಗೆ ಸದರಿ ವಾಹನವನ್ನು 11 ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿದ್ದೆನು , ಹಣ ಇರಲಿಲ್ಲ, ವಿಮೆ ಮಾಡಿಸಿಲ್ಲ ಎಂದು ಹೇಳಿದ್ದೆನು ಎಂದರೆ ಸರಿಯಲ್ಲ. ಅಪಘಾತವಾದ ಸಂದರ್ಭದಲ್ಲಿ ನಾನು ಡಿ ಎಲ್ ನ್ನು ಹೊಂದಿರಲಿಲ್ಲ ಎಂದರೆ ಸರಿ . ನನ್ನ ದ್ವಿ ಚಕ್ರ ವಾಹನಕ್ಕೆ ವಿಮೆ ಇಲ್ಲದಿದ್ದರಿಂದ ಮತ್ತು ನಾನು ಡಿ ಎಲ್ ನ್ನು ಹೊಂದಿರದೇ ಇದ್ದರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಟಾಟಾ ಏಸ್ ವಾಹನದ ವಿರುದ್ಧ ಸುಳ್ಳುದೂರು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

ಅಪಘಾತವಾದ ತಕ್ಷಣ ಭದ್ರಾವತಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಾಗಿದ್ದೆನು ಎಂದರೆ ಸರಿ. ನಂತರ ಮಂಗಳೂರಿನಲ್ಲಿರುವ ಫಾದರ್

ಮುಲ್ಲಾ ಆಸ್ಪತ್ರೆಯಲ್ಲಿಯೂ ಸಹ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದೆನು. ಬಲಗಾಲಿಗೆ ಆದ ಮೂಳೆ ಮುರಿತ ಗಾಯಕ್ಕೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ

ಎಂ ವಿ ಸಿ ನಂ.660/2022
**ಪಿಡಬ್ಲ್ಯೂ 02**

ಪಡೆದುಕೊಂಡಿರುತ್ತೇನೆಂದರೆ ಸರಿ. ಸಾಕ್ಷಿಯು ಸ್ವತಃ ಗಾಯವು ಹೆಚ್ಚಾಗಿದ್ದರಿಂದ ಮಂಗಳೂರಿಗೆ ಹೋಗಿರುತ್ತೇನೆಂದು ನುಡಿಯುತ್ತಾರೆ. ಮಂಗಳೂರಿನ ಫಾದರ್ ಮುಲ್ಲಾ ಆಸ್ಪತ್ರೆಯಲ್ಲಿ ನನ್ನ ಎಡಗಾಲಿಗೆ ಆದ ಗಾಯದ ಚಿಕಿತ್ಸೆಗಾಗಿ ದಾಖಲಾಗಿದ್ದೆನು ಎಂದರೆ ಸರಿ. ಅಪಘಾತವಾದ ಆರು ತಿಂಗಳ ನಂತರ ಮಂಗಳೂರಿನ ಫಾದರ್ ಮುಲ್ಲಾ ಆಸ್ಪತ್ರೆಗೆ ದಾಖಲಾಗಿರುತ್ತೇನೆಂದರೆ ಸಾಕ್ಷಿಯು ಮೂರು ತಿಂಗಳಾಗಿತ್ತು ಎಂದು ನುಡಿಯುತ್ತಾರೆ. ಆಗಸ್ಟ್- 2022 ರಲ್ಲಿ ಫಾದರ್ ಮುಲ್ಲಾ ಆಸ್ಪತ್ರೆಗೆ ದಾಖಲಾಗಿರುತ್ತೇನೆಂದರೆ ಸರಿ. ಸದರಿ ಫಾದರ್ ಮುಲ್ಲಾ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ದಾಖಲಾಗಿದ್ದೆನು ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ನಾನು ನನ್ನ ಎಡಗಾಲು ಒಂದು ವಾರದಿಂದ ನೋವು ಬರುತ್ತಾ ಇದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಅಪಘಾತದಿಂದ ಆದ ಗಾಯವೆಂದು ಹೇಳಿಲ್ಲ ಎಂದರೆ ಸರಿ.

ನನಗೆ ರಕ್ತ ಒತ್ತಡದ ಕಾಯಿಲೆ ಇರುವುದಿಲ್ಲ. ಪುನಃ ಸೆಪ್ಟೆಂಬರ್- 2022 ರಲ್ಲಿ ಫಾದರ್ ಮುಲ್ಲಾ ಆಸ್ಪತ್ರೆಗೆ ದಾಖಲಾಗಿದ್ದೆನು ಎಂದರೆ ಸರಿ. ಫಾದರ್ ಮುಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಗಾಯಕ್ಕೂ ಮತ್ತು ಅಪಘಾತಕ್ಕೂ ಸಂಬಂಧವಿಲ್ಲ ಎಂದರೆ ಸಾಕ್ಷಿಯು ಅಪಘಾತದಿಂದ ಆದ ಬಲಗಾಲಿನ ಗಾಯದಿಂದ ಎಡಗಾಲಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-25 ಬಿಲ್ಲುಗಳಿಗೂ ಮತ್ತು ಅಪಘಾತದಿಂದ ಆದ ಗಾಯಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸೆಪ್ಟೆಂಬರ್ -2022 ರ ನಂತರ ಪುನಃ ಫಾದರ್ ಮುಲ್ಲಾ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿರುವುದಿಲ್ಲ ಎಂದರೆ ಸರಿ. ನಿಪಿ-17 ನ್ನು ಈ ಅರ್ಜಿಗಾಗಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ಅಪಘಾತವಾದ್ದರಿಂದ ಪರಿಹಾರ ಹಣವನ್ನು ಪಡೆಯಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ನನ್ನ ಆದಾಯ ಮತ್ತು ಉದ್ಯೋಗ ಬಗ್ಗೆ ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ನಾನು ಮಾಸಿಕ ರೂ. 25 ಸಾವಿರ ಆದಾಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

1ನೇ ಹೆ ಹಿ ವ್ಯ ನ್ಯಾ. ಮತ್ತು
ಸದಸ್ಯರು, ಎಂ.ಎ.ಸಿ.ಟಿ. ಶಿವಮೊಗ್ಗ.